ಸಂತಾಪ ಸೂಚಕ ನಿರ್ಣಯ.

ಅಧ್ಯಕ್ಷರು : ಮಾಜಿ ಶಾಸಕರಾದ ಶ್ರೀ ಎಸ್.ಎಂ. ಮರಿಯಪ್ಪನವರು ದಿನಾಂಕ : 19-7-1997 ರಂದು ನಿಧನರಾದುದನ್ನು ಅತ್ಯಂತ ವಿಷಾದದಿಂದ ಈ ಸದನಕ್ಕೆ ತಿಳಿಸುತ್ತಿದ್ದೇನೆ. ಶ್ರೀಯುತರಾದ ಮರಿಯಪ್ಪನವರು ಸಮಾಜ ಸೇವಕರಾಗಿದ್ದು, ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು ಹಾಗೂ ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 1952-57 ರವರೆಗೆ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ, ಪಿರಿಯಾಪಟ್ಟಣ ಕೇಂದ್ರದ ಸರ್ವತೋಮುಖ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿದ ಕೀರ್ತಿ ಶ್ರೀಯುತರದಾಗಿರುತ್ತದೆ. ಮೃತರ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು).

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಲಾಗುವುದು.

ಸಭಾಧ್ಯಕ್ಷರ ಅನುಮತಿ ಮೇರೆಗೆ ಪ್ರಸ್ತಾಪಿಸಲಾದ ವಿಷಯ

ರಾಜ್ಯದಲ್ಲಿ ವಿದ್ಯುತ್ ದರ ಏರಿಕೆ ಕುರಿತು ನಡೆದ ಧರಣಿ.

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ತಾವು ಅಸಕ್ತಿ ವಹಿಸಿ, ಇಲ್ಲಿ ಏನು ಒಂದು ಡೆಡ್ ಲಾಕ್ ಕ್ರಿಯೇಟ್ ಆಗಿತ್ತು, ಅದನ್ನು ಬಗೆಹರಿಸಬೇಕೆಂದು ಸಾಕಷ್ಟು ಪ್ರಯತ್ನಪಟ್ಟಿರಿ, ಅದಕ್ಕಾಗಿ ತಮ್ಮ ಪ್ರಯತ್ನಕ್ಕೆ ನಾವು ಅಭಿನಂದಿಸುತ್ತೇವೆ. ಈ ವಿಷಯದ ಬಗ್ಗೆ ಎಲ್ಲಾ ವಿರೋಧ ಪಕ್ಷದ ನಾಯಕರುಗಳನ್ನು ಒಂದು ಕಡೆ ಸೇರಿಸಿ ಚರ್ಚೆ ಮಾಡಿ ಇದಕ್ಕೆ ಯಾವುದಾದರೂ ಪರಿಹಾರ ಕಂಡುಹಿಡಿಯತಕ್ಕಂಥ ಪ್ರಯತ್ನ ಮಾಡೋಣ ಎನ್ನತಕ್ಕಂಥ ಮಾತನ್ನು ತಾವು ಹೇಳಿದ ಮೇಲೆ ತಮ್ಮ ಮಾತಿಗೆ ನಾವು ಮನ್ನಣೆ ಕೊಟ್ಟು, ತಮ್ಮ ಅನಿಸಿಕೆಯನ್ನು ನಾವು ಒಪ್ಪಿಕೊಂಡು ತಾವು ಕರೆದಂಥ ಸಭೆಗೆ ಹಾಜರಾಗಿದ್ದೆವು. ಆದರೆ, ಸರ್ಕಾರ ತನ್ನದೇ ಆದಂಥ ಹಠಮಾರಿತನ ಮತ್ತು ತನ್ನದೇ ಆದಂಥ ಧೋರಣೆಯನ್ನು ಅವಲಂಭಿಸಿದ್ದಕ್ಕಾಗಿ ಈ ಡೆಡ್ ಲಾಕ್ ಕ್ರಿಯೇಟ್ ಆಗಿತ್ತು. ಅದು ಇನ್ನೂ ಸಾಲ್ವ್ ಆಗಲಿಲ್ಲ ಅಥವಾ ಅದಕ್ಕೆ ಪರಿಹಾರ ಕಂಡುಹಿಡಿಯಲಿಕ್ಕಾಗಲಿಲ್ಲ. ನಿನ್ನೆ ದಿವಸ ಹಾಗೂ ರಾತ್ರಿ ಮತ್ತು ಇವತ್ತು ಸತತವಾಗಿ ಧರಣಿಯನ್ನು ಈ ಸದನದಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರು ಮತ್ತು ಸದಸ್ಯರುಗಳು ಮಾಡಿ ಜನರ ಸಮಸ್ಯೆಗೆ ಸ್ಪಂದಿಸಿ ಅದಕ್ಕೆ ಪರಿಹಾರವನ್ನು ಸರ್ಕಾರದಿಂದ ಕೊಡಿಸಬೇಕು ಎನ್ನತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಿದ್ದಾರೆ. ಅದಕ್ಕಾಗಿ ನಾನು ನಮ್ಮ ಎಲ್ಲಾ ವಿರೋಧ ಪಕ್ಷದ ಶಾಸಕ ಮಿತ್ರರುಗಳಿಗೆ ನಾನು ಅಭಿನಂದಿಸುತ್ತೇನೆ. ಎಲ್ಲಾ ವಿರೋಧ ಪಕ್ಷದ ನಾಯಕರುಗಳು ಮತ್ತು ಸದಸ್ಯರುಗಳು ಇದರ ಬಗ್ಗೆ ಆಸಕ್ತಿ ವಹಿಸಿ ಒಗ್ಗಟ್ಟನ್ನು ತೋರಿಸಿ ದಿನಾಂಕ 30-6-96 ರಂದು ಎಲೆಕ್ಟ್ರಿಸಿಟಿ ಪ್ರೈಸ್‌ಹೈಕ್ ಬಗ್ಗೆ ಹೊರಡಿಸಿರುವ ನೋಟಿಫಿಕೇಷನ್ ಅನ್ನು ವಿತ್‌ಡ್ರಾ ಮಾಡಿ ಕೊಳ್ಳಬೇಕೆಂದು ಎಲ್ಲರೂ ಪ್ರಾಮಾಣಿಕವಾಗಿ